ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 24 ಇಎಸ್‌ಟಿ 4 (ಬಿ)(3) 2018 /1901

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 01.10.2018

## ಸುತ್ತೋಲೆ

ವಿಷಯ: ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕೇತರ ಸಿಬ್ಬಂದಿಗಳಿಗೆ ಕಾಲಮಿತಿ ಬಡ್ತಿ/ಸ್ವಯಂಚಾಲಿತ ವಿಶೇಷ ಮುಂಬಡ್ತಿ ಮಂಜೂರು ಮಾಡಿದ ಸಂದರ್ಭದಲ್ಲಿ ವೇತನ ಶ್ರೇಣಿಯನ್ನು ತಪ್ಪಾಗಿ ನಿಗದಿಪಡಿಸಿರುವ ಬಗ್ಗೆ.

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಮುಂಬಡ್ತಿಯಿಲ್ಲದೆ ಒಂದೇ ಹುದ್ದೆಯಲ್ಲಿ 15 ವರ್ಷಗಳು ಸೇವೆ ಸಲ್ಲಿಸಿರುವ ಬೋಧಕೇತರ ಸಿಬ್ಬಂದಿಗಳಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ಮಂಜೂರು ಮಾಡಿದ ಸಂದರ್ಭದಲ್ಲಿ ಕೆಲವು ಹುದ್ದೆಗಳಿಗೆ ಮುಂಬಡ್ತಿ ಹುದ್ದೆಯ ವೇತನ ಶ್ರೇಣಿಯನ್ನು ಮೀರಿ ಮುಂದಿನ ಹಂತದ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದು ಕಂಡುಬಂದಿರುತ್ತದೆ.

ಆದರೆ **ಕರ್ನಾಟಕ ಸಿವಿಲ್ ಸೇವೆಗಳು (ಹಿರಿಯ ವೇತನ ಶ್ರೇಣಿಯಲ್ಲಿ ಸ್ವಯಂಚಾಲಿತ ವಿಶೇಷ ಮುಂಬಡ್ತಿ) ನಿಯಮಗಳು, 1991** ರಲ್ಲಿ ಹಿರಿಯ ವೇತನ ಶ್ರೇಣಿಯನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

2. (4) **"ಹಿರಿಯ ವೇತನ ಶ್ರೇಣಿ"** ಎಂದರೆ ಆಯ್ಕೆಕಾಲಿಕ ವೇತನ ಶ್ರೇಣಿಯ (ಕಾಲಮಿತಿ ವೇತನ ಶ್ರೇಣಿ) ಮುಂದಿನ ಹಂತದ ವೇತನ ಶ್ರೇಣಿ ಅಥವಾ ನೌಕರನಿಗೆ ಮಂಜೂರಾಗಿರುವ **ಆಯ್ಕೆಕಾಲಿಕ ವೇತನ ಶ್ರೇಣಿ (ಕಾಲಮಿತಿ ವೇತನ ಶ್ರೇಣಿ) ಹಾಗೂ ಮುಂಬಡ್ತಿ ಹುದ್ದೆಯ ವೇತನ ಶ್ರೇಣಿಗಳೆರಡೂ ಒಂದೇ ಆಗಿದ್ದರೆ ಆ ಮುಂಬಡ್ತಿ ಹುದ್ದೆಯ ವೇತನ ಶ್ರೇಣಿ.**

ಅಂದರೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಾಗ **ಮುಂಬಡ್ತಿ ಹುದ್ದೆಯ ವೇತನ ಶ್ರೇಣಿಯ ಮುಂದಿನ ಹಂತದ ವೇತನ ಶ್ರೇಣಿಯನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.** ಆದುದರಿಂದ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕೇತರ ಸಿಬ್ಬಂದಿಗಳಿಗೆ ಹಿರಿಯ ವೇತನ ಶ್ರೇಣಿಯಲ್ಲಿ ಸ್ವಯಂಚಾಲಿತ ವಿಶೇಷ ಮುಂಬಡ್ತಿಯನ್ನು ಮಂಜೂರು ಮಾಡುವ ಸಂದರ್ಭದಲ್ಲಿ **ಮುಂಬಡ್ತಿ ಹುದ್ದೆಯ ವೇತನ ಶ್ರೇಣಿಯನ್ನು ಮೀರಿ ಮುಂದಿನ ಹಂತದ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿರುವುದನ್ನು ಮಾರ್ಪಡಿಸಿ, ಮುಂಬಡ್ತಿ ಹುದ್ದೆಯ ವೇತನ ಶ್ರೇಣಿಯಲ್ಲಿ ವೇತನವನ್ನು ಮರುನಿಗದಿಪಡಿಸಲು ಹಾಗೂ ಹೆಚ್ಚುವರಿಯಾಗಿ ವೇತನವನ್ನು ಪಾವತಿಸಿದ್ದಲ್ಲಿ ಅದನ್ನು ಹಿಂಪಡೆಯಲು ಆದೇಶಿಸಿದೆ.**

ಈ ಬಗ್ಗೆ ಎಲ್ಲಾ ಪ್ರಾಂಶುಪಾಲರು **ದಿನಾಂಕ:** 31.10.2018 ರೊಳಗಾಗಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದೆ.

**ಸಕ್ಷಮ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:
ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳು.

ಪ್ರತಿ: ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ (ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು).

Comp.1-E-EST4B-General-Circulars